**ಸಾಕ್ಷಿಯನ್ನು ದಿಃ 16.06.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ಸ.ನಂ.18 ಕ್ಕೆ ಸಂಬಂಧಿಸಿದಂತೆ ಈ ದಾವೆ ದಾಖಲು ಮಾಡಿದ್ದೇನೆ. ಮಹಾದೇವಮ್ಮನ ಮನೆ ಕಡೆಯವರು ಯಾವಾಗಲೂ ಗಲಾಟೆ ಮಾಡುತ್ತಿದ್ದರಿಂದ ಈ ದಾವೆ ಹಾಕಿದ್ದೇನೆ.

2. ದಾವಾ ಜಮೀನು ಸರ್ಕಾರದಿಂದ ನಮಗೆ ಸಾಗುವಳಿ ಕೊಟ್ಟಿದ್ದಾರೆ. ಸದರಿ ಸಾಗುವಳಿ ಚೀಟಿಯನ್ನು ಹಾಜರುಪಡಿಸಿದ್ದೇನೆ.

3. ಪ್ರತಿವಾದಿ ನನ್ನ ನಾದಿನಿ ಅಂದರೆ ನನ್ನ ಪತಿಯ ತಂಗಿ.

4. ಅವರ ತಂದೆ ಹೆಸರು ಸಂಗಪ್ಪ ಹಾಗೂ ತಾಯಿ ಗೌರಮ್ಮ ಎಂದರೆ ಸರಿ. ಅವರಿಗೆ 12 ಜನ ಮಕ್ಕಳು ಎಂದರೆ ಸರಿ.

5. ದಾವಾ ಜಮೀನು ಇನ್ನೂ ದುರಸ್ತು ಮತ್ತು ಪೋಡಿ ಆಗಿರುವುದಿಲ್ಲ.

6. ಸ.ನಂ.18 ರಲ್ಲಿ ನಿಮ್ಮ ಜಮೀನು ಬಿಟ್ಟು ಎಷ್ಟು ಇದೆ ಎಂದರೆ, ಯಾವುದೂ ಇಲ್ಲ.

7. ಸ.ನಂ.18 ರಲ್ಲಿ ಒಟ್ಟು 9 ಎಕರೆ 20 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ.

8. ನೀವು ಯಾವುದೇ ಪೋಡಿ, ಹದ್ದುಬಸ್ತು ಮಾಡದೇ ಬೇಲಿ ಹಾಕಲು ಪ್ರಯತ್ನ ಮಾಡುತ್ತಿದ್ದೀರಾ ಎಂದರೆ, ನಾನು ಬೇಲಿ ಹಾಕಿ 8 ವರ್ಷವಾಯಿತು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಸರ್ವೇ ದವರನ್ನು ಕರೆಸಿಲಿಲ್ಲ, ನಾನು ಉಳುಮೆ ಮಾಡುತ್ತಿದ್ದ ಜಮೀನಿಗೆ ಮಾತ್ರ ಬೇಲಿ ಹಾಕಿಸಿರುತ್ತೇವೆ.

9. ಸರ್ವೆ ಮಾಡಿಸಿ ಬೇಲಿ ಹಾಕಿಕೊಳ್ಳಲು ತೊಂದರೆ ಇತ್ತಾ ಎಂದರೆ, ಇರಲಿಲ್ಲ, ದನಗಳು ತೊಂದರೆ ಕೊಡುತ್ತಿದ್ದರಿಂದ ಹಾಕಿಸಿದ್ದೇನೆ ಎಂದು ನುಡಿಯುತ್ತಾರೆ.

10. ನಮ್ಮ ಜಮೀನಿನ ಪೂರ್ವಕ್ಕೆಃ ರುದ್ರಪ್ಪ ನವರ ಜಮೀನು, ಸದರಿ ರುದ್ರಪ್ಪ ನವರ ಪೂರ್ವಕ್ಕೆ ಪ್ರತಿವಾದಿಗಳ ಜಮೀನು ಎಂದರೆ ಸರಿಯಲ್ಲ.

11. ಸ.ನಂ.17 ಮತ್ತು 18 ಅಕ್ಕಪಕ್ಕ ಇವೆ ಎಂದರೆ ಸರಿಯಲ್ಲ.

12. ಸ.ನಂ.17 ಹಾಗೂ 18 ರಲ್ಲಿ 9 ಎಕರೆ 20 ಗುಂಟೆ ಜಮೀನು, ಒಟ್ಟು ಆರ್.ಟಿ.ಸಿ ಯಲ್ಲಿ ಇದೆ ಎಂದರೆ ಸರಿಯಲ್ಲ.

13. ನಿಮಗೆ ಹಾಗೂ ಪ್ರತಿವಾದಿಗೆ ಆಗಾಗ ಸಣ್ಣಪುಟ್ಟ ಜಗಳವಾಗುತ್ತವೆ ಎಂದರೆ ಸರಿ. ಆ ಕಾರಣಕ್ಕೆ ನೀವು ಅವರಿಗೆ ಅವರ ಜಮೀನಿಗೆ ಹೋಗಲು ತೊಂದರೆ ಕೊಡುತ್ತೀರಾ ಎಂದರೆ ಸರಿಯಲ್ಲ.

14. ದಾವಾ ಸ್ವತ್ತಿನಲ್ಲಿ 5 ಗುಂಟೆ ಖರಾಬು ಇದೆ ಎಂದರೆ ಸರಿಯಲ್ಲ. ಸದರಿ ಖರಾಜು ಜಮೀನಿನಲ್ಲಿ ಪ್ರತಿವಾದಿಗಳು ಓಡಾಡುತ್ತಿದ್ದು, ನೀವು ಅವರಿಗೆ ಅಡ್ಡಿಪಡಿಸುತ್ತಿದ್ದೀರಾ ಎಂದರೆ ಸರಿಯಲ್ಲ.

15. ನಿಮ್ಮ ಮಾವನವರ ಕಾಲದಿಂದಲೂ ದಾವಾ ಜಮೀನಲ್ಲಿ ಪ್ರತಿವಾದಿಗಳು ಓಡಾಡುತ್ತಿದ್ದು, ನೀವು ಈಗ ತೊಂದರೆ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

16. ದಾವಾ ಸ್ವತ್ತಿನ ಪಶ್ಚಿಮಕ್ಕೇ ರಸ್ತೆ ಇದೆ.

17. ದಾವಾ ಜಮೀನಿಗೆ ಎರಡು ಕಡೆ ರಸ್ತೆ ಇದೆಯಾ ? ಎಂದರೆ ಸರಿ. ಇನ್ನೊಂದು ರಸ್ತೆ ಉತ್ತರಕ್ಕೆ ಇದೆ.

18. ದಾವಾ ಜಮೀನಿನ ದಕ್ಷಿಣಕ್ಕೆ ಸೋಮಶೇಖರಪ್ಪ.

19. ಪ್ರತಿವಾದಿಯು ದಿಃ 19.02.2022 ರಲ್ಲಿ ಉಪವಿಭಾಗಾಧಿಗಾರಿಗಳ ಕಛೇರಿಯಿಂದ ಎಲ್.ಎನ್.ಡಿ.341/2021-22 ರಂತೆ ಮುಖ್ಯ ರಸ್ತೆಯಿಂದ ಜಮೀನಿಗೆ ಹೋಗಲು ಕೇಸ್ ಹಾಕಿದ್ದರು ಎಂದರೆ, ನನಗೆ ಗೊತ್ತಿಲ್ಲ.

20. ಉಪವಿಭಾಗಾಧಿಗಾರಿಗಳು ಪ್ರತಿವಾದಿಯ ಕೋರಿಕೆಯ ಮೇರೆಗೆ ಕ್ರಮ ವಹಿಸುವಂತೆ ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

21. ದಿಃ 24.02.2023 ರಲ್ಲಿ ಸ.ನಂ.17 ಮತ್ತು 18 ಕ್ಕೆ ಪ್ರತಿವಾದಿಯ ಜಮೀನಿಗೆ ಹೋಗಲು ಸರ್ವೆ ಮಾಡಲು ನಿಮಗೆ ನೊಟೀಸು ನೀಡಿದ್ದಾರೆ ಎಂದರೆ ಸರಿಯಲ್ಲ. ಆ ದಿನ ತಹಶೀಲ್ದಾರ್ ಜೊತೆ ಪೊಲೀಸರು ಸಹ ಬಂದಿದ್ದರು ಎಂದರೆ ಸರಿಯಲ್ಲ. ಆ ದಿನ ನೀವು ಸರ್ವೆ ಮಾಡಲು ತಕರಾರು ಮಾಡಿದ್ದೀರಾ ಎಂದರೆ ಸರಿಯಲ್ಲ.

22. ಸರ್ವೆ ಮಾಡಲು ಬಂದ ನಂತರ, ನೀವು ಈ ದಾವೆಯನ್ನು ಹಾಕಿದ್ದೀರಾ ಎಂದರೆ ಸರಿಯಲ್ಲ.

23. ಈ ದಾವೆ ಹಾಕಿದ ನಂತರ ನ್ಯಾಯಾಲಯದಲ್ಲಿ ದಾವೆ ಇದೆ ಎಂಬ ಕಾರಣ ಹೇಳಿ ಸರ್ವೇ ಮಾಡಿಸಲು ತೊಂದರೆ ನೀಡುತ್ತಿದ್ದೀರಾ ಎಂದರೆ ಸರಿ.

24. ನೀವು ಸರ್ವೇ ಮಾಡಲು ಅವಕಾಶ ನೀಡದ ಕಾರಣಕ್ಕೆ ಗ್ರಾಮ ಲೆಕ್ಕಾಧಿಕಾರಿಗಳು ನಿಮ್ಮ ವಿರುದ್ಧ ದೂರು ನೀಡಿದ್ದರು ಎಂದರೆ ಸುಳ್ಳು.

25. ಸೋಮಶೇಖರಪ್ಪನವರ ದಕ್ಷಿಣ ಭಾಗಕ್ಕೆ 9 ಗುಂಟೆ ಖರಾಜು ಜಾಗ ಇದೆ ಎಂದರೆ ನನಗೆ ಗೊತ್ತಿಲ್ಲ.

26. ನಿಮ್ಮ ಪತಿಯ ಮರಣಾನಂತರ, ನೀವು ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

27. ಸ.ನಂ.17 ರಲ್ಲಿ ಪ್ರತಿವಾದಿಗೆ ಎಷ್ಟು ಜಮೀನು ಇದೆ ಎಂದರೆ, ನನಗೆ ಗೊತ್ತಿಲ್ಲ. ಅವರಿಗೆ 1 ಎಕರೆ 22 ಗುಂಟೆ ಇದೆ ಎಂದರೆ ಸರಿಯಲ್ಲ.

28. ಸ.ನಂ.17 ರಲ್ಲಿ ಯಾರ್ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ.

29. ದಾವಾ ಸ್ವತ್ತು ಯಾವುದೇ ದುರಸ್ತಿ ಹಾಗೂ ಅಳತೆ ಕಾರ್ಯ ಆಗದೇ, ನೀವು ಬೇಲಿ ಹಾಕಿ ಪ್ರತಿವಾದಿಗಳಿಗೆ ವ್ಯವಸಾಯ ಮಾಡಲು ತೊಂದರೆ ನೀಡುತ್ತಿದ್ದೀರಾ ಎಂದರೆ ಸರಿಯಲ್ಲ.

30. ನೀವು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ